ಇತರ ಫಸಲುಗಳನ್ನು ನಾಶ ಮಾಡಿರುವ ಬಗ್ಗೆ ಮಾನ್ಯ ಕಂದಾಯ ಯೋಜನಾ ಮಂತ್ರಿ ನೀರಾವರಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು.— ವೆಂಕಟರಾಮಯ್ಯನವರೇ, ಬೊಮ್ಮಾಯಿಯವರು ಇದಕ್ಕೆ ಎರಡು ದಿವಸ ಟೈಮ್ ಬೇಕು ಎಂದು ಕೇಳಿದ್ದಾರೆ. ವಿವರವಾದ ಉತ್ತರ ತರಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಆರ್. ವೆಂಕಟರಾವಯ್ಯ.—ಮೊನ್ನೆಯ ದಿವಸ ನೋಟೀಸ್ ಕೊಟ್ಟರು. ಇದರ ಜೊತೆಗೆ ಮೊದಲು ಇದರ ಬಗ್ಗೆ ಡಿಸ್‌ಕಷನ್ ಆಗಿದೆ. ಆದ್ದರಿಂದ ಸಮಯ ಏತಕ್ಕೆ ಬೇಕು ?

ಅಧ್ಯಕ್ಷರು.—ನಾಳೆ ನಾಡಿದ್ದರಲ್ಲಿ ಉತ್ತರ ತರಿಸಿ ಕೊಡುತ್ತೇನೆ.

ಶ್ರೀ ಪಂಪಾಪತಿ.—ಇದನ್ನು ಪರಿಶೀಲನೆ ಮಾಡಬೇಕು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ತಮಗೆ ಗೊತ್ತಿರುವ ಹಾಗೆ ಪಂಪಾಪತಿಯವರೇ ಇದನ್ನು ರೈಸ್ ಮಾಡಿದ್ದು.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಇದು ಏನಾಗಿದೆ ಎಂದು ತಿಳಿಯಬೇಕಾಗುತ್ತದೆ.

ಅಧ್ಯಕ್ಷರು.—ಪತ್ರ ಬರೆದು ಹೇಳಿದ್ದಾರೆ. ಇದರ ಬಗ್ಗೆ ಆದಷ್ಟು ಬೇಗ ಉತ್ತರ ತರಿಸಿ ಕೊಡುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಪಂಪಾಪತಿ.—ಅಲ್ಲಿನ ಜನರ ಸ್ಥಿತಿ ಗತಿ ಏನಾಗಿದೆ ಸರ್ಕಾರ ಅಲ್ಲಿ ಏನು ಸಹಾಯ ಒದಗಿಸಿದೆ, ಅಲ್ಲಿನ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ಎಂಬುದನ್ನು ತಿಳಿಯಬೇಕಾದ್ದು ಬಹಳ ಮುಖ್ಯ.

ಅಧ್ಯಕ್ಷರು.—ನಾಳೆ ಅಥವಾ ನಾಡಿದ್ದು ಉತ್ತರ ತರಿಸಿ ಕೊಡುತ್ತೇನೆ. ಶ್ರೀ ಜಿ. ಎಸ್. ಶಿವಸಂಜಪ್ಪ ಮತ್ತು ಶ್ರೀ ಬಿ. ಲಕ್ಕಪ್ಪ ಅವರು ತಮ್ಮ ಗಮನ ಸೆಳೆಯುವ ಸೂಚನೆಯ ಬಗ್ಗೆ ಮಂತ್ರಿಗಳ ಗಮನ ಸೆಳೆಯಬಹುದು.

೨) ಪಾವಗಡ ತಾಲ್ಲೂಕು ವೈ. ಎನ್. ಹೊಸಕೋಟೆ ಬಳಿ ಕಳ್ಳತನದ ಆರೋಪಿ ಶ್ರೀ ರಾಮಪ್ಪ ಪೋಲೀಸರಿಂದ ತಪ್ಪಿಸಿಕೊಳ್ಳಲು ಯತ್ನಿಸಿ ಮೃತ ಪಟ್ಟಿರುವುದು.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಪಾವಗಡ ತಾಲ್ಲೂಕು ವೈ. ಎನ್. ಹೊಸಕೋಟೆ ಬಳಿ ದಿನಾಂಕ ೭-೫-೮೮ರ ರಾತ್ರಿ ಕಳ್ಳತನದ ಆರೋಪಿ ಶ್ರೀ ರಾಮಪ್ಪ ಪೋಲೀಸ್ ವಾಹನದಿಂದ ತಪ್ಪಿಸಿಕೊಳ್ಳಲು ಯತ್ನಿಸಿ ಗಾಯಗೊಂಡು ಸಂಶಯಾತ್ಮಕ ರೀತಿಯಲ್ಲಿ ಮೃತಪಟ್ಟಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರಣ್ಣ (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ .....

ವೈ. ಎನ್. ಹೊಸಕೋಟೆ ಸಬ್ ಇನ್ಸ್‌ಪೆಕ್ಟರ್‌ರವರು ದಿನಾಂಕ ೭-೫-೧೯೮೮ ರಂದು ೨೫ ವರ್ಷ ವಯಸ್ಸಿನ ಕೊರಚ ಜನಾಂಗಕ್ಕೆ ಸೇರಿದ ರಾಮು ಎನ್ನುವವನನ್ನು ಬಂದು ಕಳ್ಳತನದ ಪ್ರಕರಣದಲ್ಲಿ ದಸ್ತಗಿರಿ ಮಾಡಿದ್ದರು. ಸದರಿ ರಾಮನು ವೈ. ಎನ್. ಹೊಸಕೋಟೆಯ ಸರಹದ್ದಿನಲ್ಲಿರುವ ಕೋಟಗುಡ್ಡ ಗ್ರಾಮದವನಾಗಿದ್ದು, ಅದೇ ಗ್ರಾಮದಿಂದ ವರದಿಯಾದ ಒಂದು ಕನ್ನ ಕಳವು ಪ್ರಕರಣಗಳಲ್ಲಿ ಕಳವಾದ ಆಲಾರಂ ಗಡಿಯಾರವನ್ನು ಆತನಿಂದ ವಶಪಡಿಸಿಕೊಳ್ಳಲಾಗಿತ್ತು. ತಾನು ಮತ್ತೆರಡು ಕಳವು ಪ್ರಕರಣಗಳನ್ನು ಮಾಡಿರುವುದಾಗಿಯೂ, ಕಳುವು ಸಾಮಾನನ್ನು ತೈಲಾಪುರ ಗ್ರಾಮದ ವೀರಕ್ಯಾತಯ್ಯ ಎನ್ನುವರ ಬಳಿ ಮಾರಿರುವುದಾಗಿಯೂ ಹೇಳಿದನು ಅದೇ ದಿನ ಸಾಯಂಕಾಲ ಕಳ್ಳ ರಾಮನನ್ನು ವೈ. ಎನ್. ಹೊಸಕೋಟೆ ಸಬ್ ಇನ್ಸ್‌ಪೆಕ್ಟರ್‌ರವರು ತೈಲಾಪುರ ಗ್ರಾಮಕ್ಕೆ ಜೀಪಿನಲ್ಲಿ ಕರೆದುಕೊಂಡು ಹೋದರು. ಆದರೆ ಕದ್ದ ಮಾಲು ಪಡೆದವೀರಕ್ಯಾತಯ್ಯ ಊರಿನಲ್ಲಿರಲಿಲ್ಲ. ಸಬ್‌ಇನ್ಸ್‌ಪೆಕ್ಟರ್ ರಾಮಪ್ಪನವರು ಹಿಂದಿರುಗಿ ಪಾವಗಡದ ಮುಖಾಂತರ ವೈ. ಎನ್. ಕೊಸಕೋಟೆಗೆ ಹೋಗುತ್ತಿರುವಾಗ ಕಳ್ಳ ರಾಮನು ಸಬ್‌ಇನ್‌ಸ್ಪೆಕ್ಟರ್ ಹಿಡಿದುಕೊಂಡಿದ್ದ ಬೆಡಿಯನ್ನು ಬಲವಂತವಾಗಿ ಬಿಡಿಸಿಕೊಂಡು ಹೋಗುತ್ತಿರುವ ಜೀಪಿನಿಂದ ರೋಡ್ ಮೇಲೆ ದುಮುಕಿ ಗಾಯಗೊಂಡನು. ಸಬ್‌ಇನ್ಸ್‌ಪೆಕ್ಟರ್‌ರವರು

ಹಾಯಗೊಂಡ ಆರೋಪಿಯನ್ನು ತಿರುಗಿ ಜೀಪಿನಲ್ಲಿ ಕರೆದುಕೊಂಡು ಹೋಗಿ ಪಾವಗಡ ಆಸ್ಪತ್ರೆಗೆ ರಾತ್ರಿ ೧೦–೪೫ರಲ್ಲಿ ಚಿಕಿತ್ಸೆಗಾಗಿ ಸೇರಿಸಿದರು. ಕರ್ತವ್ಯದಲ್ಲಿದ್ದ ಡಾಕ್ಟರ್‌ರವರು ೧೦–೫೫ರಲ್ಲಿ ಕಳ್ಳ ರಾಮನು ಮೃತನಾದನೆಂದು ತಿಳಿಸಿದರು.

ವಿಷಯ ತಿಳಿದ ತುಮಕೂರು ಪೋಲೀಸ್ ಸೂಪರಿಂಟೆಂಡೆಂಟ್‌ರವರು ತಕ್ಷಣ ಪಾವಗಡಕ್ಕೆ ಭೇಟಿ ಕೊಟ್ಟು ಘಟನೆಯ ಬಗ್ಗೆ ವಿಚಾರಣೆ ನಡೆಸಿದರು. ಮಧುಗಿರಿ ಅಸಿಸ್ಟೆಂಟ್ ಕಮಿಷನರ್‌ರವರಿಂದ ಶವ ಪಂಚನಾಮೆ ಹಾಗೂ ಪಾವಗಡ ಡಾಕ್ಟರ್‌ರವರಿಂದ ಶವ ಪರೀಕ್ಷೆ ಮಾಡಿಸಿ, ಸಂಬಂಧಿಕರೊಂದಿಗೆ ಹೆಣವನ್ನು ಸ್ವಂತ ಊರಾದ ಕೋಟಿಗುಡ್ಡಕ್ಕೆ ಕಳುಹಿಸಿದರು. ಅಲ್ಲಿ ಶವಸಂಸ್ಕಾರ ನಡೆಯಿತು. ಮಧುಗಿರಿ ಅಸಿಸ್ಟೆಂಟ್ ಕಮಿಷನರ್‌ರವರು ನಡೆಸಿದ ತನಿಖೆಯ ವೇಳೆ ಇಬ್ಬರು ಪ್ರತ್ಯಕ್ಷ ಸಾಕ್ಷಿದಾರರು ಕಳ್ಳ ರಾಮನು ಜೀಪಿನಿಂದ ದಬಾಯಿಕಿದ್ದನ್ನು ತಾವು ನೋಡಿದಾಗಿ ತಿಳಿಸಿದ್ದಾರೆ.

ಪೈ. ಎನ್. ಹೊಸಕೋಟೆ ಸರ್ಕಲ್ ಇನ್ಸ್‌ಪೆಕ್ಟರ್‌ರವರ ಕರ್ತವ್ಯ ವಿಮುಖತೆ ಬಗ್ಗೆ ಮಧುಗಿರಿ ಡಿ. ಎಸ್. ಪಿ. ರವರಿಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿದೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಇದು ಸತ್ಯಕ್ಕೆ ದೂರವಾದಂಥ ಮತ್ತು ಸತ್ಯವನ್ನು ಮರೆಮಾಚ್ಚುವಂಥ ಈ ಪೋಲೀಸ್ ಹೇಳಿಕೆಯನ್ನು ಏನು ಕೊಟ್ಟಿದ್ದಾರೆ. ಇದು ಸತ್ಯಕ್ಕೆ ದೂರವಾಗಿರುವಂಥ ವಿಚಾರ, ಏಕೆಂದು ಹೇಳಿದರೆ ರಾಮಪ್ಪ ಎನ್ನುವವರು ಸುಬ್ಬಣ್ಣನ ಮಗ, ಬೋರನಕಣಿವೆ ಎಂಬುದು ಅವರ ಊರು. ಕೋಟೆಗುಡ್ಡದಲ್ಲಿ ರಾಮಪ್ಪ ವಾಸವಾಗಿದ್ದ. ಗಂಗಮ್ಮ ಎಂಬುವರ ಮನೆಯಲ್ಲಿ ರಾಮಪ್ಪ ಎನ್ನುವವರು ವಾಸವಾಗಿದ್ದರು. ಅವರು ಗಂಗಮ್ಮ ಎನ್ನುವವರ ಮನೆಯಲ್ಲಿ ಅವರ ವಿಶ್ವಾಸದ ಮೇಲೆ ಅವರ ಮನೆಯಲ್ಲಿಯೇ ಇದ್ದರು. ವಿಶ್ವಾಸದಲ್ಲಿಯೇ ಇದ್ದು ಅವರಿಗೂ ಇವರಿಗೂ ಆನೈತಿಕ ಸಂಬಂಧ ಇತ್ತು ಎಂದು ಕೊಡಾ ಹೇಳಿದೆ. ಅಲ್ಲಿ ಮಂಡಲ ಪಂಚಾಯಿತಿ ಚುನಾವಣೆ ನಡೆಯುತ್ತಿತ್ತು. ಚುನಾವಣೆ ನಡೆಯುತ್ತಿರುವಂಥ ಕಾಲದಲ್ಲಿ ಪ್ರಭಾವಿ ವ್ಯಕ್ತಿ ಮಂಡಲಪಂಚಾಯಿತಿ ಚುನಾವಣೆಯಲ್ಲಿ ಆರಿಸಿ ಬಂದ. ಆ ವ್ಯಕ್ತಿಗೂ ಮತ್ತು ಗಂಗಮ್ಮನಿಗೂ ಸಂಬಂಧ ಕುದುರಿತು. ಆ ರೀತಿ ಕುದುರಿದ ಮೇಲೆ ಅಲ್ಲಿಂದ ರಾಮಪ್ಪ ಎನ್ನುವವರನ್ನು ಹೊರಹಾಕಲಾಯಿತು. ನಂತರ ಆತ ತನ್ನ ಸ್ವಂತ ಊರಾದ ಬೋರನಕಣಿವೆಯಲ್ಲಿ ವಾಸವಾಗಿದ್ದು ಸ್ವಲ್ಪ ದಿವಸ ಆದ ನಂತರ ಮತ್ತೆಕೋಟೆಗುಡ್ಡಕ್ಕೆ ಬಂದ. ಅಲ್ಲಿ ಬಂದಾಗ ಏನು ಆಯಿತು ಅಂದರೆ, ಆತ ನಾನು ಏನೇನು ಸೀರೆಗಳು, ಒಡವೆಗಳು ಕೊಟ್ಟಿದ್ದೆನು ಅವುಗಳನ್ನು ಎಲ್ಲಾ ವಾಪಸ್ ಕೊಡು ಎಂದು. ಡಿಮ್ಯಾಂಡ್ ಮಾಡಿದ, ಆಗ ಏನು ಆಯಿತು, ಆತ ವಾಪಸ್ ತೆಗೆದುಕೊಂಡು ಹೋಗಬೇಕು ಎನ್ನುವುದರಲ್ಲಿ ಕಳ್ಳತನದ ಕೇಸ್ ಆವನ ಮೇಲೆ ಕೊಡಲಾಯಿತು. ಕಳ್ಳತನದ ಕೇಸ್‌ಕೊಟ್ಟ ಮೇಲೆ ಕೋಟೆಗುಡ್ಡ ಜನರ ಎದುರಿಗೆ ಕಂಪ್ಲೈಂಟ್ ಮೇಲೆ ಅವನನ್ನು ಅರೆಸ್ಟ್ ಮಾಡಿದರು ಮತ್ತು ಮಂಡಲ್ ಪಂಚಾಯತ್ ಸದಸ್ಯರು ಮತ್ತು ಉಳಿದವರು ರಾಜಕೀಯವಾಗಿ ಅವರಿಗೆ ರಕ್ಷೆ ಇತ್ತು, ಬಲಿಷ್ಠರೂ ಆಗಿದ್ದರು. ಇನ್‌ಫ್ಲುಯೆನ್ಸ್ ಉಪಯೋಗಿಸಿ ಪೋಲೀಸರು ಹೊಡೆದರು. ಅವನನ್ನು ಅರೆಸ್ಟ್ ಮಾಡಿದ್ದು ಏಪ್ರಿಲ್ ೪, ಆತ ಸತ್ತಿರುವುದು ೭ ೮–೪೫ರಲ್ಲಿ ಇಷ್ಟು ದೀರ್ಘಕಾಲ ಪೋಲೀಸ್ ಠಾಣೆಯಲ್ಲಿಯೇ ಇಟ್ಟುಕೊಂಡಿದ್ದರು. ಅಲ್ಲಿ ಅವನಿಗೆ ಹೊಡೆದಿದ್ದಾರೆ ನೀರು ಕೊಡದೆ ಅವನಿಗೆ ಹೊಡೆದಿದ್ದಾರೆ. ನೀರು ಕೊಟ್ಟರೂ ಕುಡಿಯಲಿಕ್ಕೆ ಶಕ್ತಿ ಇಲ್ಲದ ಹಾಗೆ ಹೊಡೆದಿದ್ದಾರೆ. ಇದು ಆದ ಮೇಲೆ ಅವನು ತಪ್ಪಿಸಿಕೊಂಡು ಓಡಿ ಹೋದ ಹಾಗೆ ಹೀಗೆ ಎಂದು ಕತೆ ಕಟ್ಟುವುದಕ್ಕೆ ಪ್ರಾರಂಭ ಮಾಡಿದರು. ಕೊನೆಗೆ ಏನು ಆಯಿತು, ಅವನ ಹೆಣ ರಸ್ತೆ ಪಕ್ಕದಲ್ಲಿ ಬಸ್‌ನವರಿಗೆ ಸಿಕ್ಕಿತ್ತು. ಆಗ ಇವರು ಏನು ಮಾಡಿದರು ಅಂದರೆ ಇದು ವಿಫಲವಾಯಿತಲ್ಲ ಎಂದು ಪುನಃ ಒಂದು ಕಥೆಕಟ್ಟಿ ಪೋಲೀಸ್ ಜೀಪ್‌ನಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಅವನು ಜೀಪಿನಿಂದಹಾರಿದ, ಸತ್ತು ಹೋದ ಎನ್ನುವಂಥಕ್ಕೆ ಒಂದು ಕತೆಯನ್ನು ಸೃಷ್ಟಿ ಮಾಡಿದರು. ಪೋಲೀಸರು ನ್ಯಾಯವಾಗಿ ನಡೆದಿರುವಂಥಕ್ಕೆ ಸತ್ಯಾಂಶವನ್ನು ಮುಚ್ಚಿ ಮರೆ ಮಾಡಲು ಪ್ರಯತ್ನ ಮಾಡಿದ್ದಾರೆ. ಇದರ ಬಗ್ಗೆ ವಕೀಲರು ವಿರೋಧ ಮಾಡಿದ್ದಾರೆ. ಇದು ನಡೆದಿರುವಂಥದ್ದು ಅನ್ಯಾಯ; ಇದರಿಂದ ನ್ಯಾಯ ದೊರಕಬೇಕು ಎನ್ನುವುದು ಅಲ್ಲಿನ ವಕೀಲರಿಂದ ಹಿಡಿದು ಎಲ್ಲಾ ಸಾಮಾನ್ಯ ಜನರ ಅಭಿಪ್ರಾಯವಾಗಿದೆ. ಮತ್ತು ಪೋಲೀಸ್‌ನವರು ಅರೆಸ್ಟ್ ಮಾಡಿ ಸ್ಟೇಷನ್‌ಗೆ ಏಪ್ರಿಲ್ ೪ನ್ನಾಲ್ಕರಲ್ಲಿ ಕರೆದುಕೊಂಡು ಹೋಗಿದ್ದಾರೆ, ಹೋದ ಮೇಲೆ ಸುಬ್ಬಣ್ಣ ಮತ್ತು ಚಿಕ್ಕ ನಾಗಮ್ಮ ಅವರ ಅಣ್ಣ ಬಿಡುಗಡೆ ಮಾಡಿಸುವುದಕ್ಕೆ ವಕೀಲರನ್ನು ಕರೆದುಕೊಂಡು ಹೋದಾಗ ರಾಮನನ್ನು ಅರೆಸ್ಟ್ ಮಾಡೇ ಇಲ್ಲ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಈ ದೃಷ್ಟಿಯಿಂದ ಸಾರ್ವಜನಿಕರ ಒಂದು ಕುತೂಹಲವನ್ನು

ಕೆರಳಿಸಿದೆ. ನೀವು ಇಲ್ಲಿ ಪೋಲೀಸ್‌ನವರು ಹೇಳಿರತಕ್ಕ ಅಂಶವನ್ನೇ ಅನುಸರಿಸುವುದು ಸರಿಯಲ್ಲ. ತಾವು ಈ ಪದನದಲ್ಲಿ ಓದಿರತಕ್ಕ ಅಂಶ ಸತ್ಯಕ್ಕೆ ದೂರವಾದುದು, ಪೋಲೀಸರ ಹೇಳಿಕೆಯನ್ನು ನಂಬಿ ಕೊಂಡು...

ಅಧ್ಯಕ್ಷರು. —ಒಮ್ಮೆ ಹೇಳಿದ್ದೀರಲ್ಲ.

ಶ್ರೀ ಬಿ. ಲಕ್ಕಪ್ಪ. ಬರೀ ಪೋಲೀಸರ ಹೇಳಿಕೆಯನ್ನು ನಂಬಿಕೊಂಡು ಹೇಳಿಕೆ ಕೊಡುವುದು ಸರಿಯಲ್ಲ. ಆದ್ದರಿಂದ ದಯವಿಟ್ಟು ಇದರ ಮೇಲೆ ರೀ–ಪೋಸ್ಟ್ ಮಾರ್ಟಮ್ ಮಾಡಿಸಬೇಕು, ಯಾಕೆಂದರೆ ೧೦–೪–೮೫ಕ್ಕೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆಂದು ಅಲ್ಲಿ ೧೦.೫೫ಕ್ಕೆ ಸತ್ತಿದ್ದಾನೆಂದು ಹೇಳಿದ್ದಾರೆ. ಇವರು ಸತ್ತ ಹೆಣವನ್ನು ಪೋಸ್ಟ್ ಮಾರ್ಟಮ್ ಮಾಡಿಸಿದ್ದಾರೆ. ಡಾಕ್ಟರ್ ಮೇಲೆ ಪ್ರಭಾವ ಬೀರಿ ಸಂಜೆ ಪೋಸ್ಟ್ ಮಾರ್ಟಮ್ ಮಾಡಿಸಿದ್ದಾರೆ. ಆದ್ದರಿಂದ ದಯವಿಟ್ಟು ನನಗೆ ಬೇಕಾಗಿರುವುದು ಇಷ್ಟು, ಪುನಃ ಪೋಸ್ಟ್ ಮಾರ್ಟಮ್ ಮಾಡಿಸಬೇಕು. ಎರಡನೆಯದಾಗಿ ಆ ಪ್ರಾಂತ್ಯ ದಲ್ಲಿರತಕ್ಕ ಜನರ ಒಂದು ಸಂಶಯ ಪರಿಹಾರ ಆಗಬೇಕಾಗಿದ್ದರೆ ಪೋಲೀಸ್ ಬಗ್ಗೆ ಒಳ್ಳೆಯ ಅಭಿಪ್ರಾಯ ಈ ರಾಜ್ಯದಲ್ಲಿ ಬರಬೇಕಾದರೆ ಈ ಬಗ್ಗೆ ನ್ಯಾಯಾಂಗ ತನಿಖೆಯನ್ನು ಕಡ್ಡಾಯವಾಗಿ ನಡೆಸಬೇಕು. ಈ ಎರಡನ್ನೂ ದಯವಿಟ್ಟು ಸರ್ಕಾರ ಒಪ್ಪಿಕೊಳ್ಳಬೇಕು, ಯಾಕೆಂದರೆ ಇದರ ಮೇಲೆ ಯಾರ ಪ್ರತಿಷ್ಠೆಯ ಪ್ರಶ್ನೆಯೂ ಬರುವುದಿಲ್ಲ. ಇಲಾಖೆಯ ಗೌರವ ಮತ್ತು ಜನರಲ್ಲಿರತಕ್ಕ ಭೀತಿಯನ್ನು ತಪ್ಪಿಸುವ, ಹೋಗಲಾಡಿಸುವ ದೃಷ್ಟಿಯಿಂದ ಇದನ್ನು ಮಾಡಬೇಕೆಂದು ಹೇಳಿ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕ ವರದಿಯು ಏನು ಇದೆ. ಅದು ಸತ್ಯಕ್ಕೆ ದೂರವಾದುದು, ಇವತ್ತಿನ ದಿವಸ ಡೆಕ್ಕನ್ ಹೆರಾಲ್ಡ್‌ನಲ್ಲಿ ಈ ಬಗ್ಗೆ ಪೂರ್ಣವಾಗಿ ವಿವರ ಬಂದಿದೆ. ಏನು ಇದರ ಸ್ಟೋರಿ. ಹೇಗೆ ನಡೆಯುತು, ಇದರಲ್ಲಿ ರಾಮಪ್ಪನ ತಮ್ಮ ಪೋಲೀಸ್ ಸ್ಟೇಷನ್‌ಗೆ ಹೋಗಿ ರಾಮನನ್ನು ರಿಲೀಸ್ ಮಾಡಿಕೊಂಡು ಎಂದು ಕೇಳಿದಾಗ ರೆಫ್ಯೂಸ್ ಮಾಡುತ್ತಾರೆ. ಅರೆಸ್ಟ್ ಮಾಡೇ ಇಲ್ಲವೆಂದು ಹೇಳಿದಾಗ ಅವರು ಲಾಯರ್ ಶಿವಕುಮಾರನ್ ಅವರನ್ನು ಇಟ್ಟುಕೊಂಡು ಕೋರ್ಟಿಗೆ ಅರ್ಜಿ ಹಾಕುತ್ತಾರೆ. ಪೋಲೀಸ್‌ನವರಿಗೆ ರಿಲೀಸ್ ಮಾಡಿ ಎಂದು ಡೈರೆಕ್ಷನ್ ಅನ್ನು ಕೋರ್ಟಿನವರು ಕೊಡುತ್ತಾರೆ, ಆದರೂ ರಿಲೀಸ್ ಮಾಡುವುದಿಲ್ಲ. ಮತ್ತೆ ಅರ್ಜಿ ಹಾಕಿದಾಗ ಸಿಕ್ಕಿದ್ದು ಆತನ ಹೆಣವಾನೆ, ನಾನು ಪಾವಗಡಕ್ಕೆ ಹೋಗಿದ್ದೆ. ನನಗೆ ಬಂದ ವದಂತಿ ಪ್ರಕಾರ ಸಬ್ ಇನ್ಸ್‌ಪೆಕ್ಟರ್ ಕಾಡಿದಿದ್ದ, ಕಾನ್‌ಸ್ಟೇಬಲ್ ಸಹ ಕಾಡಿದಿದ್ದ ಎಸ್.ಐ. ಮುಂದೆ ರಾಮಪ್ಪನನ್ನು ಹಿಡಿದುಕೊಂಡು ಕೂತಿದ್ದ, ಸಬ್ ಇನ್ಸ್‌ಪೆಕ್ಟರ್ ಗಾಯಗೊಂಡ ರಾಮಪ್ಪ ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ರಿಪೋರ್ಟ್‌ನಲ್ಲಿ ಕೊಟ್ಟಿದ್ದೀರಿ. ಇದು ಖಂಡಿತ ಸತ್ಯಕ್ಕೆ ದೂರವಾದದು. ಪೋಲೀಸನವರು ಕೊಟ್ಟ ರಿಪೋರ್ಟ್ ಅನ್ನು ತಾವು ಇಲ್ಲಿ ಓದುವುದಕ್ಕೆ ಪ್ರಾರಂಭ ಮಾಡಿದ್ದೀರಿ. ಅವರು ಕೊಟ್ಟ ವರದಿಯನ್ನು ಓದಿಕೊಂಡು ಎಲ್ಲವೂ ಸರಿಯಾಗಿ ಇದೆ ಎಂದು ತಿಳಿದುಕೊಳ್ಳುವುದು ಅಷ್ಟು ಸರಿಯಲ್ಲ. ಯಾಕೆಂದರೆ ಜನ ಏನು ಹೇಳುತ್ತಾರೆ ಎಂದರೆ ಡಾಕ್ಟರ್ ಅನ್ನು ಒಳಗೆ ಹಾಕಿಕೊಂಡು ಸುಳ್ಳು ರಿಪೋರ್ಟ್ ಕೊಡಿಸಿಬಿಟ್ಟಿದ್ದಾರೆ ಎಂದು. ಬಾಡಿಯನ್ನು Exhume ಮಾಡಿ ರಿ–ಪೋಸ್ಟ್ ಮಾರ್ಟಮ್ ಮಾಡುವುದಕ್ಕೆ ಏನೂ ತೊಂದರೆ ಇದೆ. ಮತ್ತೆ ಯಾವುದಾದರೂ ಮೂಲಕ ತನಿಖೆಗೆ ಏರ್ಪಾಡು ಮಾಡಿ, ಬೇರೆ ರಿತಿಯಲ್ಲಿ ಇದು ಆಗಬೇಕು. ಇದರಲ್ಲಿ ನಿಜವಾದ ಅಂಶ ಈಚೆಗೆ ಬರಬೇಕು. ಪೋಲೀಸಿನವರ ಬಟ್ಟೆಯನ್ನು ಸ್ವಲ್ಪ ಬದಲಾವಣೆ ಏನಾದರೂ ಮಾಡಿದರೆ ಸ್ವಲ್ಪ ಅದರ ಪ್ರಭಾವದಿಂದ ಅವರ ವರ್ತನೆ ಬದಲಾಯಿಸಬಹುದು. ಯಾಕೆಂದರೆ...

ಅಧ್ಯಕ್ಷರು.—ಶಿವನಂಜಪ್ಪನವರೇ ಬಟ್ಟೆವಿಷಯ ಬೇಡ, ನೇರವಾಗಿ ಏನು ಕೇಳಬೇಕೋ ಅದನ್ನು ಕೇಳಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿಗಳು ಕಾವಿ ಬಟ್ಟೆಯನ್ನೇ ಏತಕ್ಕೆ ಹಾಕಿಕೊಳ್ಳಬೇಕು ? ಅವರು ಬಿಳಿ ಬಟ್ಟೆಯನ್ನು ಏತಕ್ಕೆ ಹಾಕಿಕೊಳ್ಳಬಾರದು ?

ಅಧ್ಯಕ್ಷರು,—ಇಲ್ಲಿ ಕಾವಿ, ಕಾಕಿ ಮತ್ತು ಖಾದಿ ಬಟ್ಟೆಗಳ ವ್ಯಾಖ್ಯಾನ ಬೇಡ.

ಶ್ರೀ ಜಿ. ಎಸ್. ಶಿವನಂಜಪ್ಪ.—ಆದಕ್ಕೆ ನಾನು ಈ ಹಿಂದೆ ಸಹ ಇಲ್ಲಿ ಪೋಲೀಸರ ಬಗ್ಗೆ ಮಾತನಾಡುವಾಗ ಅವರ ಬಟ್ಟೆ ಬಣ್ಣ ಏನಾದರು ಬದಲಾದರೆ ಪರಿಸ್ಥಿತಿ ಬದಲಾಗಬಹುದೆಂದು ಹೇಳಿದ್ದೆ. ಇಲ್ಲಿ ಪಂಖ್ಯವಾಗಿ ರಾಮನ ಬಾಡಿಯನ್ನು ಹೊರತೆಗೆದು ಪುನ: ಪೋಸ್ಟ್‌ಮಾರ್ಟಮ್ ಮಾಡಿಸಬೇಕು. ಇದರ ಜೊತೆಗೆ ಸಿ. ಒ. ಡಿ. ಮೂಲಕವಾಗಿ ಇಲ್ಲವೇ ನ್ಯಾಯಾಂಗ ತನಿಖೆ ಮೂಲಕವಾಗಿಯಾಗಲೀ ಅಥವಾ ಬೇರೆ ರೀತಿಯಿಂದ ಇದರ ತನಿಖೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ,—ಮಾನ್ಯ ಅಧ್ಯಕ್ಷರೇ, ಈ ವರದಿ ಸರಿಯಿಲ್ಲ, ಮತ್ತೊಮ್ಮೆ ಪೋಸ್ಟ್‌ಮಾರ್ಟಮ್ ಮಾಡಿಸಬೇಕೆಂದು ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. ಆದರೆ ಈ ಬಗ್ಗೆ ಅವರು ಕೊಟ್ಟಿರುವ ವರದಿಯಲ್ಲಿ ಏನು ಹೇಳಿದ್ದಾರೆಂದರೆ Cause for the death. Death is due to shock and hammerage...ಅಂದರೆ ತಲೆಗೆ ಏಟು ಬಿದ್ದು ಈ ರೀತಿ ಆಗಿದೆ ಎಂದು ವರದಿಯಲ್ಲಿ ಹೇಳಿದ್ದಾರೆ, ಈ ವಿಚಾರದಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿರುವುದನ್ನು ನಾನೂ ಓದಿದ್ದೇನೆ. ಅಲ್ಲಿನ ಸಬ್-ಇನ್ಸ್‌ಪೆಕ್ಟರ್ ಅವರು ಈ ಬಗ್ಗೆ ಸರಿಯಾಗಿ ನಡೆದುಕೊಂಡಿದ್ದಾರೆಯೇ ಅಥವಾ ಇಲ್ಲವೇ ಮತ್ತು ಈ ವಿಚಾರದಲ್ಲಿ ಅವರ ನೆಗ್ಲಿಜೆನ್ಸ್ ಏನಾದರೂ ಇದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಈಗಾಗಲೇ ಡಿವೈಎಸ್‌ಪಿ ಅವರನ್ನು ತನಿಖಾಧಿಕಾರಿಯನ್ನಾಗಿ ನೇಮಕ ಮಾಡಿದ್ದೇವೆ. ಆದರೂ ಸಹ ಮಾನ್ಯ ಶಿವನಂಜಪ್ಪನವರು ಮತ್ತು ಶ್ರೀ ಲಕ್ಕಪ್ಪನವರು ಈ ಬಗ್ಗೆ ನ್ಯಾಯಾಂಗ ತನಿಖೆ ಇಲ್ಲವೇ ಸಿ. ಒ. ಡಿ. ತನಿಖೆ ಆಗಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ತಲೆಗೆ ಮಾತ್ರವಲ್ಲ, ದೇಹದ ಬೇರೆ ಭಾಗಗಳಿಗೂ ಸಹ ಏಟುಗಳು ಬಿದ್ದಿವೆ. ಆದ್ದರಿಂದ ಈ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕೆಂದು ಅವರು ಕೇಳುತ್ತಿದ್ದಾರೆ.

ಶ್ರೀ ವೀರಣ್ಣ.—ಗಾಯಗಳಿಗೆ ಸಂಬಂಧಪಟ್ಟ ಡಾಕ್ಟರ್ ಸರ್ಟಿಫಿಕೇಟ್ ಸಹ ನನ್ನ ಬಳಿ ಇದೆ.

ಶ್ರೀ ಎಸ್. ಬಂಗಾರಪ್ಪ.—ಆ ಸರ್ಟಿಫಿಕೇಟ್ ಸರಿಯಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದೇರೀತಿ ಸರ್ಟಿಫಿಕೇಟ್ ಕೊಡಬೇಕೆಂದು ಅಲ್ಲಿನ ಸಬ್-ಇನ್ಸ್‌ಪೆಕ್ಟರ್ ಅವರು ಅಲ್ಲಿನ ಡಾಕ್ಟರ್ ಮೇಲೆ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಅಷ್ಟೇ ಅಲ್ಲ. ಈ ಕೇಸ್ ವಿಚಾರದಲ್ಲಿ ಅಲ್ಲಿನ ಡಾಕ್ಟರ್ ಮತ್ತು ಪೋಲೀಸ್ ಇಲಾಖೆಯವರು ಒಂದಾಗಿದ್ದಾರೆಂದು ಹೇಳುತ್ತಿದ್ದಾರೆ. ಈ ಕಾರಣದಿಂದ ಇದರ ಬಗ್ಗೆ ಸತ್ಯಾಂಶ ಹೊರ ಬರಲಂ ನ್ಯಾಯಾಂಗ ತನಿಖೆ ಆಗಬೇಕೆಂದು ಕೇಳುತ್ತಿದ್ದಾರೆ.

ಶ್ರೀ ವೀರಣ್ಣ.—ಅಲ್ಲಿನ ಸ್ಥಳೀಯ ಡಿವೈಎಸ್‌ಪಿ. ಅವರಿಂದ ಇಲ್ಲವೇ ಅಲ್ಲಿನ ಎಸ್. ಪಿ. ಅವರಿಂದ ತನಿಖೆ ಮಾಡಿಸಿದರೆ ನ್ಯಾಯ ದೊರಕುವುದಿಲ್ಲವೆಂಬ ಭಾವನೆ ಮಾನ್ಯ ಸದಸ್ಯರಿಗೆ ಇದೆ. ಈ ಕಾರಣದಿಂದ ಈ ಬಗ್ಗೆ ಡಿ. ಐ. ಜಿ. ಅವರಿಂದ ತನಿಖೆ ಮಾಡಿಸುತ್ತೇನೆ. ಅವರು ಸ್ವತಂತ್ರವಾಗಿ ತನಿಖೆ ನಡೆಸಿ ವರದಿ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಲೆಗೆ ಆಗಿರುವ ಗಾಯಂ ಬಿಟ್ಟರೆ ಬೇರೆ ಗಾಯಗಳಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಬೇರೆ ಗಾಯಗಳು ಇದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡುವುದಕ್ಕೆ ಮತ್ತೊಮ್ಮೆ ಪೋಸ್ಟ್‌ಮಾರ್ಟಮ್ ಮಾಡಬೇಕಾಗುತ್ತದೆ.

ಶ್ರೀ ವೀರಣ್ಣ.—ಮೇಲಿನ ಅಧಿಕಾರಿ ಒಬ್ಬರು ಇದನ್ನು ತನಿಖೆ ಮಾಡಿ ವರದಿ ಕೊಡಲಿ. ಅವರ ವರದಯಲ್ಲಿ ಶವವನ್ನು ಮತ್ತೊಮ್ಮೆ ಹೊರತೆಗೆದು ತನಿಖೆ ನಡೆಸಬೇಕೆಂದು ಹೇಳಿದರೆ ಆ ರೀತಿ ಮಾಡ ಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತನಿಖೆ ಮುಂದ ನಂತರ ಮಾಡೋಣವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಅದು ಸರಿಯಲ್ಲ.

ಶ್ರೀ ಆರ್. ವೆಂಕಟರಾವಮಯ್ಯ,—ಪೋಲೀಸರೇ ತಲೆಗೆ ಹೊಡೆದಿದ್ದರೆ ಈ ರೀತಿ ಆಗುವುದು ಉಂಟು.

ಶ್ರೀ ವೀರಣ್ಣ.—ಆದರೆ ಮಾನ್ಯ ಸದಸ್ಯರು ಈಗ ಹೇಳಿದ್ದು ಪೋಲೀಸರು ಒದ್ದರು ಎಂದು, ಪೋಲೀಸರು ತಲೆಗೆ ಹೊಡೆದರು ಎಂದು ಹೇಳಲಿಲ್ಲ.

ಶ್ರೀ ಎಸ್. ಬಂಗಾರಪ್ಪ,—ತಲೆಗೆ ಹೊಡೆಯದಿದ್ದರೆ ದೇಹದ ಬೇರೆ ಭಾಗಗಳಿಗೆ ಹೊಡೆಯಲು ಪೋಲೀಸರಿಗೆ ಅಧಿಕಾರ ಇದಯೇ ? ಇದರ ಬಗ್ಗೆಯೇ ತನಿಖೆ ಆಗಬೇಕೆಂದು ಅವರು ಕೇಳುತ್ತಿದ್ದಾರೆ ?

ಶ್ರೀ ವೀರಣ್ಣ.—ಇಲ್ಲಿ ಪೋಲೀಸರು ಹೊಡೆಯುವ ಪ್ರಶ್ನೆಯೇ ಬರುವುದಿಲ್ಲ. ಈ ಬಗ್ಗೆ ಬೆಂಗಳೂರು ಸೆಂಟ್ರಲ್ ರೇಂಜ್‌ನ ಡಿ. ಐ, ಜಿ. ಅವರನ್ನು ತನಿಖಾಧಿಕಾರಿಯನ್ನಾಗಿ ನೇಮಕ ಮಾಡಿ ಅವರಿಂದ ತನಿಖೆ ಮಾಡಿಸತಕ್ಕಂಥ ಕ್ರಮವನ್ನು ಸರ್ಕಾರ ಕೈಕೊಳ್ಳುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಈಗ ಪೋಲೀಸ್ ಎನ್‌ಕ್ವೈರಿಯನ್ನು ಯಾವುದೇ ಅಧಿಕಾರಿಯಿಂದ ಮಾಡಿಸಿದರೂ ನಮಗೆ ನಂಬಿಕೆ ಇಲ್ಲ. ಕಾರಣ ಏನೆಂದರೆ, ತಲೆಗೆ ಹೊಡೆದರು ಎಂದು ವರದಿ ಇದೆ. ಏಪ್ರಿಲ್ ನಾಲ್ಕರಿಂದ ಅವರು ಪೋಲೀಸ್ ಕಸ್ಟಡಿಯಲ್ಲಿ ಈತನನ್ನು ಇಟ್ಟುಕೊಂಡಿದ್ದಾರೆ. ಜೊತೆಗೆ ಮರ್ಮಾಂಗಕ್ಕೆ ಏಟು ಬೀಳುವ ರೀತಿಯಲ್ಲಿ ಹೊಡೆದರು ಎನ್ನುವುದಕ್ಕೆ ಸಾಕ್ಷಿ ಇದೆ, ಈ ಮಾತನ್ನು ಜನ ಹೇಳುತ್ತಾ ಇದ್ದಾರೆ. ಈ ಒಂದು ದೃಷ್ಟಿಯಿಂದ ಹೇಳುವುದಾದರೆ ನಾವು ಕಣ್ಣಲ್ಲಿ ಕಂಡು, ನಮಗೆ ಗೊತ್ತಿರತಕ್ಕ ಎಷ್ಟೋ ಸತ್ಯಾಂಶಗಳ ಬಗ್ಗೆ ಈ ಸದನದಲ್ಲಿ ಸುಳ್ಳು ಹೇಳಿಕೆ ಕೊಟ್ಟು ಅದನ್ನು ಮರೆ ಮಾಚತಕ್ಕಂಥ ರೀತಿಯಲ್ಲಿ ಉತ್ತರಗಳು ಇಲ್ಲಿ ಬರುತ್ತವೆ. ಆದುದರಿಂದ ನಾವು ಪೋಲೀಸ್ ಅಧಿಕಾರಿಗಳನ್ನು ನಂಬಬೇಕಾದ ಅಗತ್ಯವಿಲ್ಲ. ಈಗ ಇದರ ಬಗ್ಗೆ ಜುಡಿಶಿಯಲ್ ಎನ್‌ಕ್ವೈರಿ ಆಗಬೇಕು. ಮತ್ತೆ ಅಲ್ಲಿ ಅವನಿಗೆ ಏಟು ಬಿದ್ದು, ಆಷ್ಟು ದೀರ್ಘಕಾಲ ಅವನನ್ನು ಸ್ಟೇಷನ್‌ನಲ್ಲಿ ಇಟ್ಟು ಹೊಡೆದು ಹೊಡೆದು ಸಾಯಿಸಿದ್ದಾರೆ, ಆದರ ಹಿನ್ನೆಲೆ ಏನು ಎನ್ನುವುದರ ಬಗ್ಗೆ ಜುಡಿಶಿಯಲ್ ಎನ್‌ಕ್ವೈರೀನೇ ನಡೆಯಬೇಕು, ಪೋಲೀಸರ ಎನ್‌ಕ್ವೈರಿ ಕೂಡದು, ಜುಡಿಶಿಯಲ್ ಎನ್‌ಕ್ವೈರಿ ಆಗಬೇಕು. ಮೇ ೭ನೇ ತಾರೀಖು ಈ ಘಟನೆಯಾಗಿದೆ. ಇವತ್ತಿಗೆ ೨೩ದಿನಗಳು ಕಳೆದುಹೋಗಿವೆ. ಎನ್‌ಕ್ವೈರಿ ನವರು ಇಷ್ಟಪಟ್ಟರೆ ಪುನ: ಬಾಡಿಯನ್ನು ತೆಗೆಸಿ ರೀಪೋಸ್ಟ್‌ಮಾರ್ಟಂ ಮಾಡಿಸುತ್ತೇವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಈಗಾಗಲೇ ಬಹಳ ದಿನ ಆಗಿದೆ, ಇನ್ನೂ ತಡವಾದರೆ ಬಾಡಿ ಇರುವುದಿಲ್ಲ. ಮೊದಲು ಅದನ್ನು ಹೊರತೆಗೆದು ಪುನ: ಪರೀಕ್ಷೆಮಾಡಿಸಿ ನಂತರ ಜುಡಿಶಿಯಲ್ ಎನ್‌ಕ್ವೈರಿ ಕಡ್ಡಾಯವಾಗಿ ಆಗಬೇಕು.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ಈಗ ಕೋರ್ಟ್‌ನಲ್ಲಿ ಅವರು ರಿಲೀಸ್ ಮಾಡಿ ಎಂದು ಅಪ್ಲಿಕೇಷನ್ ಹಾಕಿದ್ದು ಇದೆ. ಅವರು ಉತ್ತರ ಕೊಟ್ಟಿದು ಆಗಿದೆ. That is the strange circumstance where the police people are not fair in this case. ಇದು ಗೊತ್ತಾಗುತ್ತದೆ. ಆದುದರಿಂದ ನಾವು ಫಸ್ಟ್ ಡಿಮ್ಯಾಂಡ್ ಮಾಡುತ್ತಾ ಇರುವುದು ಏನೆಂದರೆ, ಬಾಡಿ ಎಕ್ಸಾಂ ಆಗಲಿ. ರೀಪೋಸ್ಟ್‌ಮಾರ್ಟಂ ಆಗಲಿ, ಮತ್ತೆ ಡಾಕ್ಟರ್ ಸರ್ಟಿಫಿಕೇಟ್ ಬರಲಿ, ಇದು ಇಂಪಾರ್ಟೆಂಟ್. ಇದನ್ನು ಬಿಟ್ಟು ಬಿಟ್ಟು ಅವರು ಏನೋ ಮಾಡುತ್ತಾರೆ. ಬುಡಬಿಟ್ಟು ಬಿಟ್ಟು ಕೊಂಬೆ ಹಿಡಿದುಕೊಳ್ಳುವುದಕ್ಕೆ ಹೋಗುತ್ತಿದ್ದೀರಿ ಇದು ಬೇಡ. ಮೊದಲು ಬುಡವನ್ನು ಹಿಡಿದುಕೊಳ್ಳಿ. ಬಾಡಿಯನ್ನು ಎಕ್ಸಾಂ ಮಾಡಬೇಕು, ಬಾಡಿ ಎಕ್ಸಾಂ ಮಾಡಿ, ರೀಪೋಸ್ಟ್‌ಮಾರ್ಟಂ ಮಾಡಬೇಕು. ಮತ್ತೆ ಅವರ ಬ್ರದರ್ ಕೋರ್ಟ್‌ನಲ್ಲಿ ಪಿಟಿಷನ್ ಫೈಲ್ ಮಾಡಿದ್ದಾರೆ. ಆ ಪಿಟಿಷನ್‌ಗಳನ್ನೂ ಎನ್‌ಕ್ವೈರಿ ಮಾಡಬೇಕಾಗುತ್ತದೆ, ಫಸ್ಟ್ ಎಕ್ಸಾಂ ಆಗಬೇಕು. ಆಮೇಲೆ ಬೇರೆ ಯಾವುದಾದರೂ ಎನ್‌ಕ್ವೈರಿಯಾಗಲಿ ನಾವು ಬೇಡ ಎಂದು ಹೇಳುವುದಿಲ್ಲ ಫಸ್ಟ್ ಬಾಡಿ ಎಕ್ಸಾಂ ಆಗಬೇಕು. ಬೇರೆ ಇಂಜಂಕ್ಷನ್ ಇದೆ. ಆಮೇಲೆ ಸಿಓಡೀನೋ ಅಥವಾ ಜುಡಿಷಿಯಲ್ ಎನ್‌ಕ್ವೈರೀನೋ, ಸೀನಿಯರ್ ಆಫೀಸರ್‌ನಿಂದಲೋ ಎನ್‌ಕ್ವೈರಿ ಮಾಡಿಸಲಿ. ಅವರು ಕೋರ್ಟ್‌ನಲ್ಲಿರುವ ಅಪ್ಲಿಕೇಷನ್‌ನನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲ. ಇವರ ಹತ್ತಿರ ಇದ್ದರೆ ಬದಲಾಯಿಸಿ ಬಿಡುವರು, ಆದರೆ ಕೋರ್ಟ್‌ನಲ್ಲಿ ಅಪ್ಲಿಕೇಷನ್ ಹಾಕಿದ್ದಾರೆ. ಸ್ಟ್ರಾಂಗ್ ಸರ್ಕಂಸ್ಟೆನ್ಸಸ್ ಇದೆ. ಅವರು ಅರೆಸ್ಟ್ ಮಾಡಿದ್ದನ್ನು ಡಿನೈ ಮಾಡಿದ್ದಾರೆ. ಇವೆಲ್ಲಾ ಕೋರ್ಟ್‌ನಲ್ಲಿದೆ.

ಆದುದರಿಂದ ವೀರಣ್ಣನವರೇ, ನೀವು ಅಡ್ವೋಕೇಟ್ ಆಗಿದ್ದವರು, ಪ್ರಾಕ್ಟೀಸ್ ಮಾಡುತ್ತಿದ್ದಿರಿ, ಮೊದಲು ಬಾಡಿಯನ್ನು ಎಕ್ಸಾಂ ಮಾಡಿಸಿ ಆಗ ಗೊತ್ತಾಗುತ್ತದೆ ನಿಮ್ಮ ಡಿಪಾರ್ಟಮೆಂಟ್‌ನ ಉಳುಕು ಏನಿದೆಯೋ ಅದು ಗೊತ್ತಾಗುತ್ತದೆ, ದಯವಿಟ್ಟು ಅದನ್ನು ಮಾಡಿಸಿ. ಆಮೇಲೆ ನೀವು ಯಾವುದಾದರೂ ಎನ್‌ಕ್ವೈರಿ ಮಾಡಿಸಿ.

ಶ್ರೀ ವೀರಣ್ಣ.—ಈಗಾಗಲೇ ಡಿ. ಸಿ. ಯವರು ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಮಾಡುತ್ತಾ ಇದ್ದಾರೆ ನಾನು ಈಗಾಗಲೇ ಹೇಳಿದ್ದೇನೆ. ಡಿ. ಐ. ಜಿ. ಯವರನ್ನು ಎನ್‌ಕ್ವೈರಿ ಆಫೀಸರಾಗಿ ಅಪಾಯಿಂಟ್ ಮಾಡಿ ಇಮ್ಮೀಡಿಯೇಟಾಗಿ ಕೂಲಂಕಷವಾಗಿರತಕ್ಕಂಥಾ ಎನ್‌ಕ್ವೈರಿಯನ್ನು ನಾವು ಮಾಡಿಸುತ್ತೇವೆ. ಇದರ ಮೇಲೆ ಸರ್ಕಾರದಿಂದ ನಾನು ಇನ್ನೇನೂ ಹೇಳಲಿಕ್ಕೆ ಇಚ್ಛೆಪಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನಿಮಗೆ ಎರಡೆರಡು ಸಲ ಅವಕಾಶ ಕೊಟ್ಟಿದ್ದೇನೆ. ಅವರು ಉತ್ತರ ಹೇಳಿದ್ದಾರೆ If you have dissatisfied with the Govt., I cannot do anything.

(ಗೊಂದಲ)

MR. SPEAKER.—Whether you are satisfied or not, I cannot do anything. If you are dissatisfied with the answer given by the Government, I cannot do anything. The matter has been closed.

(ಗೊಂದಲ)

MR. SPEAKER.—Nothing will be recorded.

ಅಧ್ಯಕ್ಷರು.—ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ನಿಮಗೆ ಸಮಾಧಾನವಾಗದಿದ್ದರೆ ಅದಕ್ಕೆ ನಾನೇನು ಮಾಡಲಿ? If you have dissatisfied with Govt. I cannot help it.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್

x x x

ಅಧ್ಯಕ್ಷರು.—ನಾನು ಅವರನ್ನು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ. ಅವರು ಈಗಾಗಲೇ ಉತ್ತರವನ್ನು ಹೇಳಿದ್ದಾರೆ.. If you are not satisfied, I cannot do anything.

(ಗೊಂದಲ)

ಅಧ್ಯಕ್ಷರು.—ಅವರು ಈಗಾಗಲೇ ಕಾಲಿಂಗ್ ಅಟೆನ್‌ಷನ್‌ಗೆ ಉತ್ತರವನ್ನು ಕೊಟ್ಟಿದ್ದಾರೆ. ನಿಮಗೆ ಸಮಾಧಾನವಾಗದಿದ್ದರೆ ಅದಕ್ಕೆ ನಾನೇನು ಮಾಡಲಿ?

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್

x x

(ಗೊಂದಲ)

ಅಧ್ಯಕ್ಷರು.—ನಾನು ಏನೂ ಮಾಡುವುದಕ್ಕಾಗುವುದಿಲ್ಲ, ನಿಮಗೆ ಸಮಾಧಾನವಾಗದಿದ್ದರೆ ನೀವು ಅವರ ಹತ್ತಿರ ಹೋಗಿ ಡಿಸ್ಕಸ್ ಮಾಡಿ

(ಗೊಂದಲ)

---

*Not recorded as ordered by the Chair.

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್. ಮೊದಲು ಎಲ್ಲರೂ ಕೂಡ್ರಿ. ಮೊದಲು ಡಿಸಿಪ್ಲಿನ್ ಕಲಿಯಿರಿ. ಸದಸ್ಯರಿಗೆ ಅನುಕೂಲವಾಗಲಿ ಎಂದು ಪ್ರತಿದಿವಸ ೨-೩-೪ ಗಮನ ಸೆಳೆಯಂಥ ಸೂಚನೆಯನ್ನು ಹಾಕಿಸುತ್ತಿದ್ದೇನೆ. ಒಂದು ಸರಿ ಅಲ್ಲ ಎಂದು ಎರಡು ಸಾರಿ ಮಾನ ಸದಸ್ಯರು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ...

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್ xxx ಲಕ್ಕಪ್ಪನವರೇ ನೀವು ಕೈಯನ್ನು ಈ ರೀತಿ ಎತ್ತಿ ಎಲ್ಲರನ್ನೂ ಗಲಾಟೆ ಎಬ್ಬಿಸುವುದು ಸರಿಯಲ್ಲ. ದಯವಿಟ್ಟು ಕೂಡ್ರಿ The matter has been closed. I cannot compel the Government to give a reply which is suitable for you.

I cannot compel the Minister to give a reply which is favourable to you.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ಏನು ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಾನು ಅವರಿಗೆ ಹೇಳಿದ್ದೇನೆ. ಲೋಕಲ್ ಪೋಲಿಸ್ ಆಫೀಸರ್ಸ್ ಎನ್‌ಕ್ವೈರಿ ಮಾಡಿದರೆ ಅದರಿಂದ ನ್ಯಾಯ ದೊರೆಯುವುದಿಲ್ಲ ಎಂದು ಸೆಂಟ್ರಲ್ ಡಿ. ಐ. ಜಿ. ಯವರನ್ನು ಈ ಎನ್ಕ್ವೈರಿಗೋಸ್ಕರ ನೇಮಕ ಮಾಡಿಸುತ್ತೇವೆ. ಆ ವ್ಯಕ್ತಿ ಸತ್ತಿರತಕ್ಕದ್ದು ೭ನೇ ತಾರೀಖು. ಇವತ್ತು ೩೧ನೇ ತಾರೀಖು. ಅಂದರೆ ೨೪ ದಿವಸ ಕಳೆದುಹೋಗಿದೆ. ತಕ್ಷಣ ಸೆಂಟ್ರಲ್ ಡಿ. ಐ. ಜಿ. ಯವರನ್ನು ಕಳುಹಿಸಿ ಎನ್‌ಕ್ವೈರಿ ನಡೆಸುತ್ತೇವೆ. ಆದರೆ ಇವತ್ತೇ ಆಗಬೇಕು, ಈಗಲೇ ಆಗಬೇಕು ಏನ್ನುವುದು ಬೇಡ...

ಶ್ರೀ ಎಸ್, ಬಂಗಾರಪ್ಪ.—ಇನ್ನು ೧೫ ದಿವಸ ಬೇಕಾದರೂ ಆಗಬಹುದು.

MR SPEAKER.—I cannot compel the Govt. to give a definite reply which suits you.

ಶ್ರೀ ವೀರಣ್ಣ.—ತಕ್ಷಣ ಮಾಡಿಸುತ್ತೇವೆ. ಅಲ್ಲಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್‌ರವರು ಮಾಡುತ್ತಿದ್ದಾರೆ. ಡಿ. ಐ. ಜಿ. ಯವರಿಂದಲೂ ಎನ್‌ಕ್ವೈರಿ ಮಾಡಿಸುತ್ತೇನೆ. ಪುನಃ ಇದನ್ನು ಪೋಸ್ಟ್ ಮಾರ್ಟಂ ಮಾಡಬೇಕೆಂದು ಹೇಳುವುದಾದರೆ...He is free. D.I.G. and Enquiry Officers are free to make any enquiry either to remove the dead body...

ಆದ್ದರಿಂದ ಇವತ್ತೇ ಮಾಡಬೇಕು, ನಾಳೆಯೇ ಮಾಡಬೇಕೆಂದು ಹೇಳುವುದು ಬೇಡ. ಎನ್‌ಕ್ವೈರಿಗೆ ನಾವು ಒಪ್ಪಿಕೊಂಡಿದ್ದೇವೆ.

೧೨-೩೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಎನ್‌ಕ್ವೈರಿ ಮಾಡುವ ವಿಚಾರದಲ್ಲಿ ಒಂದು ಭಿನ್ನಾಭಿಪ್ರಾಯ ನವಂಗೂ ನಿಮಗೂ ಬರಬಹುದು. ಜ್ಯುಡಿಶಿಯಲ್ ಎನ್‌ಕ್ವೈರಿ ಮಂತ್ರೊಂದು ನಾವು ಕೇಳಬಹುದು. ನೀವು ಡಿ.ಐ.ಜಿ, ಲೆವೆಲ್‌ನಲ್ಲಿ ಕಳುಹಿಸಿ ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳಬಹುದು, You must understand our since request. The death stated to be occurred on 7th of this month. ಇನ್ನು ಎನ್‌ಕ್ವೈರಿ ಲೇಟ್ ಆದಷ್ಟು ಕೂಡಾ ಸತ್ಯವನ್ನು ಹೊರಗಡೆ ತರಲು ಆಗುವುದಿಲ್ಲ. Please think over it ನಾಳೆ ತನಿಖೆ ಆದಮೇಲೆ, if the DIG opined that this body is to be exhumbed ಈ ಬಾಡಿಯನ್ನು ಎಕ್ಯೂಮ್ ಮಾಡಿಸಲೇ ಬೇಕು, ಎಂದು ಹೇಳಬಹುದು. ಆದರೆ ಟೈಮ್ ಕನ್‌ಸ್ಯೂಮಿಂಗ್ ಫ್ಯಾಕ್ಟರ್ ಆಗುತ್ತದೆ.ಬಾಡಿ ಡಿಕಾಂಪೋಸ್ ಆಗುತ್ತದೆ.Government have got sufficient powers.

---

x Not recorded as ordered by the Chair

You can give directions to exhume the body. ಬಾಡಿಯನ್ನು ಎಕ್ಸ್ಹ್ಯೂಮ್ ಮಾಡಲು ಡೈರೆಕ್ಷನ್ ನೀವು ಕೊಡಬಹುದು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಪರ್ಮಿಷನ್ ತೆಗೆದು ಕೊಂಡು ಮಾಡತಕ್ಕ ವಿಚಾರ ಇರುತ್ತದೆ. Allegations are made that this deceased person's body had some other injuries other than stated in your report. ಈಗ ಬಾಡಿ ಎಕ್ಸ್ಹ್ಯೂಮ್ ಮಾಡಿಸುತ್ತೇವೆಂದು ಹೇಳಿ. There is nothing wrong in it. You can say "Yes, we agree and give directions to exhume the body" ಆ ಮೇಲೆ ಬೇಕಾದರೆ ಎನ್‌ಕ್ವೈರಿ ಮಾಡಿಸಿ, There is nothing wrong in it. ಹಿಂದೆ ನಾವು ಈ ರೀತಿ ಬಾಡಿಯನ್ನು ಹೊರಗೆ ತೆಗೆಸಿದ್ದೇವೆ. ಒಬ್ಬ ಮನುಷ್ಯ ಈ ರೀತಿಯಾಗಿ ಸತ್ತಾಗ, You must go all out to bring out the truth, ಬೇಕಾದರೆ ನಾವು ಹಿಂದಿನ ರೆಕಾರ್ಡ್ ತೆಗೆದು ಹಿಂದೆ ನಾವು ಏನು ಮಾಡಿದ್ದೇವೆಂಬುದನ್ನು ತೋರಿಸುತ್ತೇವೆ ನೀವೂ ಕೂಡ ಬಾಡಿಯನ್ನು ಎಕ್ಸ್ಹ್ಯೂಮ್ ಮಾಡಿಸುತ್ತೇವೆ ಹಾಗೂ ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಬಾಡಿ ಎಕ್ಸ್ಹ್ಯೂಮ್ ಮಾಡಿ ಎಂದು ಹೇಳಿದರೆ ಅದು ಮಾಡಲು ಬರುವುದಿಲ್ಲ. ಅದಕ್ಕೆ ಒಂದು ಪ್ರೊಸೀಜರ್ ಇದೆ ಆತನನ್ನು ವಿಷಕ್ಕೆ ಅರೆಸ್ಟ್ ಮಾಡಿದರು ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು. ಬಿದ್ದಿದ್ದು ಯಾರು ನೋಡಿದ್ದಾರೆ. ಇದೆಲ್ಲಾ ತನಿಖೆಯಾಗುತ್ತಿದೆ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರವರು ತನಿಖೆ ಮಾಡುತ್ತಿದ್ದಾರೆ. ಈಗ ಅವರ ಬಾಡಿ ಎಕ್ಸ್ಹ್ಯೂಮ್ ಮಾಡಬೇಕಂ, ಅದರ ಅಗತ್ಯ ಇದೆಯೆಂದು ಹೇಳಿದರೆ ಅವಶ್ಯಕವಾಗಿ ಬಾಡಿ ಎಕ್ಸ್ಹ್ಯೂಮ್ ಮಾಡುತ್ತೇವೆ. ಈ ಬಗ್ಗೆ ವ್ಯತನ ಸಂಬಂಧಿಕರು ಈ ಶವವನ್ನು ಹೊರಗೆ ತೆಗೆಯಬೇಕು, ಇದರಲ್ಲಿ ಸಂಶಯ ಇದೆ ಎಂದಂ ಏನಾದರೂ ಹೇಳಿ ಆರ್ಜಿ ಕೊಟ್ಟರೆ ಆಗ ಎಕ್ಸ್ಹ್ಯೂಮ್ ಮಾಡಬಹುದು. ಆದರೆ ಅವರು ಯಾರೂ ಅರ್ಜಿಯನ್ನು ಕೊಟ್ಟಿಲ್ಲ. ಅವರು ಅರ್ಜಿ ಕೊಡದಿದ್ದರೆ ಏನಂ ಮಾಡಲೂ ಆಗುವುದಿಲ್ಲ. ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಅವರಾದರೂ ಈ ಬಗ್ಗೆ ಆರ್ಡರ್ ಮಾಡಬೇಕು. ಆದಕ್ಕೆ ನಮ್ಮದು ಅಂದರೆ ಪೋಲೀಸ್ ಡಿಪಾರ್ಟ್‌ಮೆಂಟಿನವರ ಆಕ್ಷೇಪ ಏನು ಇಲ್ಲ. ಈಗ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಅವರ ಎನ್‌ಕ್ವೈರಿ ಮಾಡುತ್ತಿರುವುದರಿಂದ ಅವರ ಸಂಬಂಧಿಕರು ನಮಗೆ ಸಂಶಯ ಇದೆಯೆಂದು ಅವರಿಗೆ ಅರ್ಜಿ ಸಲ್ಲಿಸಿದರೆ ಅವರಂ ಕ್ರಮ ಕೈಗೊಳ್ಳುತ್ತಾರೆ, ತನಿಖೆಯಲ್ಲಿ ಏನಾದರೂ ಸಂಶಯ ಇದೆಯೆಂದು ಗೊತ್ತಾದರೆ ಅವರಂ ಬಾಡಿಯನ್ನು ಎಕ್ಸ್ಹ್ಯೂಮ್ ಮಾಡಲಂ ಆರ್ಡರ್ ಮಾಡಬಹುದು. ಅದಕ್ಕೆ ನಮ್ಮಿಂದ ಯಾವುದೇ ರೀತಿಯ ಆಕ್ಷೇಪ ಇರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ನಾನು ಏನು ಹೇಳುತ್ತಿದ್ದೇನೆಂದರೆ.....

ಅಧ್ಯಕ್ಷರು.—ಅವರು ಉತ್ತರ ಹೇಳಿದ್ದಾರೆ. ಇನ್ನೇನು ಬೇಕು ನಿಮಗೆ?

ಶ್ರೀ ಎಸ್. ಬಂಗಾರಪ್ಪ.—ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್‌ಗೆ ಮೃತನ ಸಂಬಂಧೀಕರು ಅರ್ಜಿ ಕೊಡುವುದು ಬಿಡುವುದು ಎಂಬ ಬಗ್ಗೆ ನಮ್ಮ ಸಮಾಜದಲ್ಲಿ ಯಾವ ರೀತಿಯ ವ್ಯವಸ್ಥೆ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಕೊಟ್ಟರೆ ಬಾಡಿ ಎಕ್ಸ್ಹ್ಯೂಮ್ ಮಾಡುವ ಅಧಿಕಾರ ಅವರಿಗೆ ಇದೆ. ಆದರೆ ಕಾನೂನು ವಿಚಾರ ಎಲ್ಲರಿಗೂ ಗೊತ್ತಾಗುವುದಿಲ್ಲ. ಈಗಾಗಲೇ ಅವರ ಸಂಬಂಧೀಕರು, ಅನ್ಯಾಯ ಆಗಿದೆ ಎಂದು ಹೇಳಿದ್ದಾರೆ. ಹಾಗೂ ಈ ವಿಷಯ ಕೋರ್ಟಿಗೆ ಹೋಗಿದೆ. ನಿಮಗೆ ಅಧಿಕಾರ ಇದೆ. ನೀವು ಏತಕ್ಕೆ ಬಾಡಿಯನ್ನು ಎಕ್ಸ್ಹ್ಯೂಮ್ ಮಾಡಬೇಕಂ ಎಂದು ಡೈರೆಕ್ಷನ್ ಕೊಡಬಾರದಂ? ಅರ್ಜಿಯನ್ನು ಕೊಟ್ಟರೆ ಮಾಡಿಸುತ್ತೇವೆಂದು ಏಕೆ ಹೇಳುತ್ತೀರಿ? ಈಗಾಗಲೇ ಈ ವಿಷಯವನ್ನು ಕೋರ್ಟಿಗೆ ತಿಳಿಸಿದ್ದಾರೆ. ಈಗ ನಾವು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಿಗೆ ಈ ಬಗ್ಗೆ ಡೈರೆಕ್ಷನ್ ಕೊಡಿ ಎಂದು ಹೇಳುತ್ತೇವೆ. ಬಾಡಿ ಎಕ್ಸ್ಹ್ಯೂಮ್ ಮಾಡುವುದಕ್ಕೆ ಸಂಬಂಧೀಕರು ಅರ್ಜಿ ಕೊಟ್ಟಮೇಲೆ ಮಾಡಬೇಕೆಂದಂ ಯಾವ ಕಾನೂನಿನಲ್ಲಿದೆ? ಒಂದು ಸಾರಿ ಸದನದಲ್ಲಿ ಚರ್ಚೆ ಮಾಡಿದರೆ Government have taken cognisance of this matter. You have got ample powers. Govt, has got ample powers to direct the Sub Divisional Magistrate to order for the exhumation of the body, ನಿಮಗೆ ಅಧಿಕಾರ ಇದೆ. ಅದನ್ನು ಎಕ್ಸರ್‌ಸೈಜ್ ಮಾಡಿ. ಇದರ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕು,

ಶ್ರೀ ರಾಮಕೃಷ್ಣ ಹೆಗಡೆ.—ಅವರ ಸಂಬಂಧಿಕರು ಯಾರಾದರೂ ಬಾಡಿಯನ್ನು ಎಕ್ಸಾಮ್ ಮಾಡಬೇಕೆಂದು ಅರ್ಜಿ ಕೊಟ್ಟಿದ್ದರೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಕಾನೂನು ಪ್ರಕಾರ ಆರ್ಡರ್ ಮಾಡುತ್ತಾರೆ. ಆದರಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ, ಅವರು ಆರ್ಡರ್ ಮಾಡಿದರೆ ಪೋಲೀಸ್ ಇಲಾಖೆಯ ಯಾವುದೇ ಆಕ್ಷೇಪ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಹಸ್ತಕ್ಷೇಪ ಮಾಡುವ ಬಗ್ಗೆ ಹೇಳುತ್ತಿಲ್ಲ. ನಿಮಗೆ ಅಧಿಕಾರ ಇದೆ. ನೀವು ಏಳಕ್ಕೆ ನೇರವಾಗಿ ಡೈರೆಕ್ಷನ್ ಕೊಡಬಾರದು?

ಅಧ್ಯಕ್ಷರು.—ಉದಾಸಿಯವರೇ, ನಿಮ್ಮ ಪ್ರಶ್ನೆ ಇದ ಆ ಬಗ್ಗೆ ಮಂತ್ರಿಗಳ ಗಮನ ಸೆಳೆಯಿರಿ.

(ಗೊಂದಲ)

ಅಧ್ಯಕ್ಷರು.—ಈಗ ಆ ವಿಷಯ ಅಲ್ಲಿಗೆ ಮುಕ್ತಾಯವಾಗಿದೆ. ಆ ಬಗ್ಗೆ ಮಾತನಾಡಿದರೆ ಯಾವುದೂ ರೆಕಾರ್ಡ್ ಆಗುವುದಿಲ್ಲ. ಎಲ್ಲರೂ ಎದ್ದೆದ್ದು ನಿಲ್ಲುತ್ತೀರಲ್ಲ ಏಕೆ? ಅವರು ಸಮರ್ಪಕವಾಗಿ ಉತ್ತರ ಹೇಳಿದ್ದಾರೆ. ದಯವಿಟ್ಟು ಕೂರುವುದನ್ನು ಕಲಿಯಿರಿ. ಈ ರೀತಿ ಎದ್ದೆದ್ದು ನಿಲ್ಲುವುದು ಸರಿಯಲ್ಲ. ಮೊದಲು ಶಿಸ್ತು ಕಲಿಯಿರಿ. ಡೆಪ್ಯೂಟಿ ಲೀಡರ್ ಮಾತನಾಡುವುದಕ್ಕೆ ನಿಂತೂ ನಿಮಗೆ ಸಮಾಧಾನ ಇಲ್ಲವೆ? ಗಲಾಟೆ ಮಾಡುವುದೇ ನಿಮ್ಮ ಕೆಲಸವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರಾಮಪ್ಪನ ತಮ್ಮನೇ ಅಡ್ವೊಕೇಟ್ ಮುಖಾಂತರ ಅರ್ಜಿ ಕೊಟ್ಟು.....

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತುತ್ತೇನೆ. ಏನೆಂದರೆ, ಇದರಲ್ಲಿ ಯಾರ್ಯಾರು ಸಹಿ ಹಾಕಿದ್ದಾರೆ ಅವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಇದೆ.

ಅಧ್ಯಕ್ಷರು.—ನಿಮಗೆ ಕಾನೂನು ಗೊತ್ತಿಲ್ಲ. ನೀತಿ ನಿಯಮ ಗೊತ್ತಿಲ್ಲವೆಂದರೆ ಈ ಕಡೆಯವರಾದರೂ ಹೇಳಲಿ, ಆ ಕಡೆಯವರಾದರೂ ಹೇಳಲಿ ಅದಕ್ಕೆ ಬೆಲೆ ಕೊಡಬೇಕು. ಗವರ್ನರ ಸೆಳೆಯುವ ಸೂಚನೆ ಕಳುಹಿಸಿದರು ಶಿವನಂಜಪ್ಪನವರು ಮತ್ತು ಲಕ್ಕಪ್ಪನವರು ಅವರಿಬ್ಬರಿಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇವೆ. ಆದರೆ ನೀವು ಎದ್ದೆದ್ದು ನಿಲ್ಲುತ್ತೀರಿ, ನಿಮಗೆ ಇನ್ನೂ ಶಿಸ್ತು ಕಲಿಸಬೇಕೆ?

ಶ್ರೀ ಎಸ್. ಬಂಗಾರಪ್ಪ —ಬಸವರಾಜ ಪಾಟೀಲ್ ಅನ್ವರಿಯವರು ಅಧ್ಯಕ್ಷರಿಗೆ ಫುಲ್ ಪವರ್ ಕೊಟ್ಟಿದ್ದರೆ ನಮ್ಮ ತಕರಾರು ಇಲ್ಲ .....

ಅಧ್ಯಕ್ಷರು.—ಈಗ ನಿಮಗೆ ಪರ್ಮಿಷನ್ ಕೊಟ್ಟು ಆಯಿತು. ಕೇಳಿಯೂ ಆಯಿತು. ಅವರು ಉತ್ತರವನ್ನು ಹೇಳಿದರು, ವೀರಣ್ಣನವರು ಹೇಳಿದ್ದಾರೆ, ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮುಖ್ಯ ಮಂತ್ರಿಗಳು ಡಿಫೆಂಡ್ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಡಿಫೆಂಡ್ ಪ್ರಶ್ನೆ ಅಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಮ್ಮ ಮೈಯಿನ್ ಅಲಿಗೇಷನ್ ಏನೆಂದರೆ ಪೋಲೀಸರೆ ಹೊಡೆತದಿಂದ ಅವರು ತೀರಿಕೊಂಡಿದ್ದಾರೆ. ಅದಕ್ಕೆ ಅವರು ಇಲ್ಲವೆಂದು ಹೇಳುತ್ತಾರೆ. ಅದಕ್ಕಾಗಿ ಬಾಡಿಯನ್ನು ಎಗ್ಸಾಂ ಮಾಡಿಸಿ, ಪೋಸ್ಟ್ ಮಾರ್ಟಂ ಮಾಡಿಸಿ, ಇದಕ್ಕೆ ವಿಚಾರಣೆಯನ್ನು ನಡೆಸಿ ಎಂದು ಹೇಳುತ್ತೇವೆ. ಇದು ಆಗುವುದಿಲ್ಲವೆಂದರೆ ಹೇಗೆ? ಈ ಬಗ್ಗೆ ಅಡ್ವೊಕೇಟ್ ಅವರ ಮೂಲ ಅಪ್ಲಿಕೇಷನ್ ಕೊಟ್ಟಿದ್ದಾರೆ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಹೇಳಿದ ಉತ್ತರವನ್ನು ನೀವು ಸರಿಯಾಗಿ ಕೇಳಲಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.—ಹೆಣವನ್ನು ಅಲ್ಲೇ ಬಿಸಾಕಿದ್ದರು ಹೆಣವನ್ನು ನೋಡಬೇಕೆಂದು ಹೋದವರನ್ನು ಅಲ್ಲೇ ನಿಲ್ಲಿಸಿದರು. ಅದನ್ನು ನೂರಾರು ಜನರು ನೋಡಿದ್ದಾರೆ. ಅದಕ್ಕೋಸ್ಕರ ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಎಗ್ಸಾಂ ಮಾಡಿಸಿ ಎಂದು ಹೇಳುತ್ತೇವೆ. ಪಾವಗಡದಲ್ಲಿ ಪದೇ ಪದೇ ಈ ರೀತಿ ಆಗುತ್ತಿದೆ. ಪದ್ಮಕ್ಕನ ಕೇಸ್ ಆಯಿತು. ನಾರಾಯಣನ ಕೇಸ್ ಆಯಿತು. ಈ ರೀತಿ ಪಾವಗಡದಲ್ಲಿ ನಡೆಯುವುದು ಒಂದು ಪರಿಪಾಠವಾಗಿದೆ. ಅಲ್ಲಿನ ಜನರಿಗೆ ವಿಶ್ವಾಸ ಮೂಡಬೇಕು. ಸರ್ಕಾರದವರು, ಪೋಲೀಸಿನವರು ನಮಗೆ ರಕ್ಷಣೆ ನೀಡುತ್ತಾರೆ, ಅವರಲ್ಲಿಗೆ ಹೋದಂತವರಿಗೆ ಸರಿಯಾಗಿ ನೋಡಿಕೊಳ್ಳುತ್ತಾರೆ, ನ್ಯಾಯವಾಗಿ ನಡೆದುಕೊಳ್ಳುತ್ತಾರೆ, ಎಂಬುದು

ಗೊತ್ತಾಗಬೇಕಲ್ಲ. ಆದಕ್ಕಾಗಿ ನಾವು ಬಾಡಿಯನ್ನು ಎಗ್ಸಾಂ ಮಾಡಿಸಿ ಎಂದರೆ ಸಂಬಂಧಿಕರು ಆರ್ಜಿ ಕೊಟ್ಟರೆ ಮಾಡುತ್ತಾರೆ, ಇಲ್ಲದಿದ್ದರೆ ಇಲ್ಲ ಅಂದರೆ ಹೇಗೆ? ಒಪ್ಪಿಕೊಂಡರೆ ಇದೇನು ಪ್ರತಿಷ್ಠೆಯ ಪ್ರಶ್ನೆ ಅಲ್ಲ. ಇದರಿಂದ ಪೊಲೀಸರಿಗೇನು ತೊಂದರೆಯಾಗುತ್ತದೆ? ಅವರ ಪ್ರೆಸ್ಟೀಜ್ ಏನು ಹೋಗುತ್ತದೆ? ಸರ್ಕಾರದ ಪ್ರೆಸ್ಟೀಜ್ ಏನು ಹೋಗುತ್ತದೆ? ನ್ಯಾಯ ಸಿಗುವಾಗ ಪ್ರತಿಕ್ಕೆ ಒಪ್ಪಬಾರದು ? ಆದ್ದರಿಂದ ಪುನಃ ಇದನ್ನು ಪರಿಶೀಲಿಸಬೇಕು, ಬಾಡಿ ಎಗ್ಸಾಂ ಮಾಡುವುದಕ್ಕೆ ಆರ್ಡರ್ ಮಾಡಬೇಕೆಂದು ಮತ್ತೊಮ್ಮೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇನ್ನೊಮ್ಮೆ ಉತ್ತರ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಈ ಒಂದು ವಿಚಾರದಲ್ಲಿ ಎಷ್ಟು ಈ ಮನೆಯ ಸಮಯವನ್ನು ತೆಗೆದುಕೊಳ್ಳುತ್ತಿದ್ದಾರೆ. ತನಿಖೆ ಮಾಡುವುದಕ್ಕೆ ನಮ್ಮ ಆಕ್ಷೇಪವಿಲ್ಲ. ಎನ್‌ಕ್ವೈರಿ ನಡೆಯುತ್ತಿದೆ. ಅವರು ಆಗತ್ಯಬಿದ್ದರೆ ಎಕ್ಸ್ಯಾಮ್ ಮಾಡುತ್ತಾರೆ, ಆದರೆ ಇದೆ ರೀತಿಯಲ್ಲಿ ಮಾಡಬೇಕೆಂದು ನಾವು ಒತ್ತಾಯ ಮಾಡುವುದಕ್ಕಾಗುವುದಿಲ್ಲ.

(ಈ ಹಂತದಲ್ಲಿ ಪ್ರತಿ ಪಕ್ಷದ ಎಲ್ಲ ಸದಸ್ಯರು ಎದ್ದುನಿಂತು ಮಾತನಾಡಿದರು)

(ಗೊಂದಲ)

(ಅಧ್ಯಕ್ಷರು ಯಾವುದನ್ನೂ ರೆಕಾರ್ಡ್ ಮಾಡಿಕೊಳ್ಳಬಾರದೆಂದು ಆಜ್ಞಾಪಿಸಿದರು)

(ಈ ನಿಟ್ಟಿನಲ್ಲಿ ಪ್ರತಿಪಕ್ಷದ (ಕಾಂಗ್ರೆಸ್ ಐ) ಸದಸ್ಯರೆಲ್ಲರೂ ಸಭಾತ್ಯಾಗವನ್ನು ಮಾಡಿದರು)

ಹಾನಗಲ್ ಸಬ್‌ಡಿವಿಜನ್‌ನಲ್ಲಿ ೧೬೦ ನೀರಾವರಿ ಪಂಪುಸೆಟ್‌ಗಳಿಗೆ ಮಂಜೂರಾತಿ ದೊರೆತಿದ್ದರೂ ಟ್ರಾನ್ಸ್‌ಫಾರ್ಮರ್ ಇಲ್ಲದ್ದೆರೈತರಿಗೆ ತೊಂದರೆಯಾಗಿರುವುದು.

ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಅಧ್ಯಕ್ಷರೇ ಹಾನಗಲ್ ಸಬ್ ಡಿವಿಜನ್‌ನಲ್ಲಿ ೧೬೦ ನೀರಾವರಿ ಪಂಪ್‌ಸೆಟ್‌ಗಳಿಗೆ ಮಂಜೂರಾತಿ ದೊರೆತಿದ್ದರೂ ಕಳೆದ ಎರಡು ತಿಂಗಳಿಂದ ತಂತಿ ಹಾಗೂ ಟ್ರಾನ್ಸ್‌ಫಾರ್ಮರ್‌ಗಳ ಸರಬರಾಜು ಇಲ್ಲದೆ ರೈತರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಮಾನ್ಯ ಅಧ್ಯಕ್ಷರೇ, ಹಾನಗಲ್ ತಾಲ್ಲೂಕಿನಲ್ಲಿ ಹಾಲಿ ೭೬ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಅಂದಾಜು ಮಂಜೂರಾಗಿದೆ. ಇವುಗಳ ಪೈಕಿ ೧೨ರ ಕೆಲಸ ಪ್ರಗತಿಯಲ್ಲಿದೆ ಈ ಅಂದಾಜುಗಳು ೧೧-೩-೧೯೮೪ ರಿಂದ ಈಚೆಗೆ ಮಂಜೂರಾದವುಗಳು.

ಹಾನಗಲ್ ತಾಲ್ಲೂಕಿನಲ್ಲಿ ೧೯೮೮ನೇ ಏಪ್ರಿಲ್ ತಿಂಗಳಲ್ಲಿ ೧೨ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಯಿತು. ಈ ತಾಲ್ಲೂಕಿನಲ್ಲಿ ಪ್ರತಿ ವರ್ಷವು ಗುರಿಮೀರಿ ಪ್ರಗತಿ ಸಾಧಿಸಲಾಗುತ್ತಿದೆ: ೧೯೮೬—೮೭ನೇ ಸಾಲಿನಲ್ಲಿ ಗುರಿ ೧೪೦ ಪಂಪ್‌ಸೆಟ್ಟುಗಳಾಗಿದ್ದು ಸಾಧನೆ ೩೧೪ ಆಗಿದೆ. ಇದೇರೀತಿ ೧೯೮೭—೮೮ನೇ ಸಾಲಿನ ಗುರಿ ೨೦೦ ಪಂಪ್‌ಸೆಟ್ಟುಗಳಾಗಿದ್ದು ಸಾಧನೆ ೩೪೫ ಆಗಿದೆ. ಈ ಸಬ್ ಡಿವಿಜನ್‌ಗೆ ಇತ್ತೀಚೆಗೆ೨೦ ಕಿ.ಮೀ ತಂತಿ ಸರಬರಾಜು ಮಾಡಲಾಗಿದೆ. ಮತ್ತು ೧೧.೨೫ ಕೆವಿಎ ಟ್ರಾನ್ಸ್ ಫಾರ್ಮರ್‌ಗಳನ್ನು ಸರಬರಾಜು ಮಾಡಲಾಗಿದೆ.

೧೯೮೮-೮೯ನೇ ಸಾಲಿನ ಗುರಿ ೨೨೫ ಪಂಪ್‌ಸೆಟ್ಟುಗಳು.

ರಾಜ್ಯದಲ್ಲಿ ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ತಿಗಾಗಿ ಹೊಂದಾಯಿಸಲ್ಪಡುವ ಅರ್ಜಿಗಳ ಸಂಖ್ಯೆ ವಾರ್ಷಿಕ ಗುರಿಗಿಂತ ಬಹಳ ಅಧಿಕವಾಗಿದೆ. ಇದು ಗುರಿಯ ಬಿಡುಪರೆ ಪಟ್ಟಿ ನಷ್ಟಾಗಿರುತ್ತದೆ. ಆದ್ದರಿಂದ ಹಲವಾರು ಪ್ರಕರಣಗಳಲ್ಲಿ ಕಾರ್ಯ ನಿಧಾನವಾಗುವುದು ಅನಿವಾರ್ಯ. ಮಂಡಲಿಯ ಈ ಕಾರ್ಯಕ್ಕೆ ಲಭ್ಯವಿರುವ ಹಣಕ್ಕೆ ಅನುಗುಣವಾಗಿ ವಾರ್ಷಿಕ ಗುರಿ ನಿಗದಿ ಮಾಡಿ ಅದಕ್ಕನುಗುಣವಾಗಿ ಸಾಮಗ್ರಿಗಳನ್ನು ಸರಬರಾಜು ಮಾಡುತ್ತದೆ. ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸರಬರಾಜಿಗೆ ಬೇಕಾಗುವ ಸಾಮಗ್ರಿಗಳನ್ನು ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗಿದೆ.